ಸಾಕ್ಷಿಯನ್ನು ದಿಃ **03.01.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ ಸಿ.ಆರ್. ವಕೀಲರಿಂದಃ-</u>

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಗಾರೆ ಕೆಲಸ ಮಾಡುತ್ತೇನೆ. ನನ್ನ ತಂದೆ ಹೆಸರು ಪಾಪಯ್ಯ, ತಾಯಿ ಹೆಸರು ಚೆನ್ನಮ್ಮ. ಪಾಪಯ್ಯ-ಚೆನ್ನಮ್ಮರವರಿಗೆ ಒಟ್ಟು ಐದು ಜನ ಮಕ್ಕಳು. ಅವರುಗಳೆಂದರೆ, ಪುಟ್ಟಸ್ವಾಮಿ, ಸಣ್ಣಯ್ಯ, ವೀರಭದ್ರ, ಶಿವ ಹಾಗೂ ನಾನು ಲಕ್ಷ್ಮಣ. ಪಾಪಯ್ಯ ಮತ್ತು ಚನ್ನಮ್ಮರವರಿಗೆ 5 ಜನ ಮಕ್ಕಳು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ದಾಖಲೆಗಳೆಲ್ಲ ಸುಳ್ಳು ದಾಖಲೆಗಳು, ಅವುಗಳಲ್ಲಿ ನಾನು ನಮ್ಮ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಓದು ಬರಹ ಬರದ ಕಾರಣ ವಂಶವೃಕ್ಷ ಹಾಜರುಪಡಿಸಿದ್ದೆನೆಯೋ ಇಲ್ಲವೋ ಎಂದು ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ ಹೇಳಲು ಸಾಧ್ಯವಿಲ್ಲ. ನಾನು ವಂಶವೃಕ್ಷವನ್ನು ಹಾಜರು ಪಡಿಸಿದ್ದೇನೆಯೋ ಇಲ್ಲವೋ ಗೊತ್ತಿಲ್ಲ.

ಪಾಪಯ್ಯ ಮತ್ತು ಚನ್ನಮ್ಮನ ಮಕ್ಕಳಾದ ನಾವೆಲ್ಲ ನಮ್ಮ ನಮ್ಮ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದೆವೆ ಎಂದರೆ ಸರಿ. ನಮ್ಮ ತಾಯಿ ಚನ್ನಮ್ಮ ಬದುಕಿದ್ದ ಕಾಲದಲ್ಲೆ ನಮ್ಮೆಲ್ಲರ ಮದುವೆಗಳಾಗಿ ಆ ಸಮಯದಿಂದಲೇ ನಾವು ಪ್ರತ್ಯೇಕ ವಾಸವಾಗಿದ್ದೆವು ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.